1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**986/2025**

ಹೆಸರುಃ ಹನುಮಂತಪ್ಪ ಚಾಸಾಃ 1

ತಂದೆಯ ಹೆಸರುಃ ತಿಮ್ಮಪ್ಪ ಪ್ರಾಸಾ: 1

ವಯಸ್ಸುಃ 35 ವರ್ಷ

ಉದ್ಯೋಗಃ ವ್ಯವಸಾಯ

ವಾಸ ಸ್ಥಳಃ ಗಾಳಿಹಳ್ಳಿ ಗ್ರಾಮ, ಚನ್ನಗಿರಿ ತಾಃ

ಸಾಕ್ಷಿಗೆ ದಿನಾಂಕಃ 01-12-2025 ರಂದು ಪ್ರಮಾಣ ವಚನ ಭೋಧಿಸಲಾಯಿತು .

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-4, 5 ಮತ್ತು 8 ನನ್ನ ಮಾವಂದಿರು, ಚಾಸಾ-6 ನನ್ನ ಅಳಿಯ, ಚಾಸಾ-7 ನನ್ನ ಮಗ, ಚಾಸಾ-9 ರಿಂದ 11 ನನ್ನ ಸಂಬಂಧಿಕರು. ಅರೋಪಿತರು ನನ್ನ ಪರಿಚಿತರು.

ಆರೋಪಿತರು ಮತ್ತು ನನ್ನ ಮದ್ಯೆ ಯಾವುದೇ ಗಲಾಟೆ ನಡೆದಿಲ್ಲ, ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈಯ್ದಿಲ್ಲ, ಆರೋಪಿತರು ನನಗೆ ಕಟ್ಟಿಗೆ , ಕಬ್ಬಿಣದ ಸರಳಿನಿಂದ ಮತ್ತು ಕೈ ಕಾಲುಗಳಿಂದ ಹೊಡೆದು ಹಲ್ಲೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ.

ಆರೋಪಿತರಿಗೂ ಮತ್ತು ನನಗೂ ಬಾಯಿ ಮಾತಿನ ಜಗಳವಾಗಿದ್ದು ಬಗೆಹರಿಸಿಕೊಳ್ಳಲು ನಾನು ಠಾಣೆಗೆ ಹೋಗಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ಪಡೆದಿರುತ್ತಾರೆ . ಅವುಗಳು ಯಾವ ದಾಖಲೆಗಳು ಎಂದು ನನಗೆ ಗೊತ್ತಿರುವುದಿಲ್ಲ .

ಸಾಕ್ಷಿಯು ಈಗ ಒಂದು ದಾಖಲೆಯನ್ನು ನೋಡುತ್ತಿದ್ದು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದನ್ನು ಯಾರು ಯಾವಾಗ, ಯಾವ ಕಾರಣಕ್ಕಾಗಿ ಬರೆದರು ಎಂದು ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ವಿಚಾರ ನನಗೆ ಗೊತ್ತಿಲ್ಲ.

ಪೊಲೀಸರು ನನಗೆ ಯಾವುದೇ ನೋಟಿಸಗಳನ್ನು ನೀಡಿಲ್ಲ.

ಈಗನೋಡುತ್ತಿರು ನೋಟಿಸುಗಳಲ್ಲಿ ನನ್ನ ಸಹಿ ಇದೆ. ಸದರಿ ನೋಟಿಸುಗಳನ್ನು ನಿಪಿ-2 ಮತ್ತು 3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ), 3(ಎ) ಎಂದು ಗುರುತಿಸಲಾಯಿತು.

ನಾನು ಯಾವುದೇ ಚಿಕಿತ್ಸೆ ಪಡೆದಿಲ್ಲ ಮತ್ತು ಪೊಲೀಸರಿಗೆ ನಾನು ಯಾವುದೇ ಮರು ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ದೂರು ಮತ್ತು ನೋಟಿಸಿಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಸಹಾಯಕರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಕೇಳಿಕೊಂಡಿದ್ದು,ದೂರು ಮತ್ತು ನೋಟಿಸನ್ನು ನೋಡಲಾಗಿ ಸಾಕ್ಷಿಯು ದೂರು ಮಹಜರು ಮತ್ತು ನೋಟಿಸಿಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ**

ದಿಃ 25-07-2025 ರಂದು ನಿಪಿ.1 ರಲ್ಲಿ ಠಾಣೆಗೆ ಹಾಜರಾಗಿ ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

ದಿನಾಂಕಃ 26-07-2025 ಮತ್ತು 29-02-2025 ರಂದು ಪೊಲೀಸರು ನನಗೆ ನಿಪಿ-2 ಮತ್ತು 3 ರಂತೆ ನೋಟಿಸು ಜಾರಿಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುತ್ತೇನೆ ಎಂದರೆ ಸರಿ . ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ – ಇರುವುದಿಲ್ಲ.**

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)** **ಓ.ಹೇ.ಕೇ. ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**